## ಖಂಡ ಖಂಡವಾಗಿ ವಿಧೇಯಂಕವನ್ನು ಪರ್ಯಾಲೋಚಿಸುವುದು
## ಖಂಡ ೨ ರಿಂದ ೪ರವರೆಗೆ

ಅಧ್ಯಕ್ಷರು.—ಖಂಡ ೨ ರಿಂದ೪ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಂಕದ ಆಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೪ರ ವರೆಗೆ ಎರಡು ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

## ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗಳಿಸುವ ಸೂತ್ರಸಂಹಿತೆಗಳು ವಿಧೇಯಕದ ಭಾಗವಾಗಿರುತ್ತವೆ.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

## ಪ್ರಸ್ತಾವದ ಅಂಗೀಕಾರ

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ ೧೯೮೭ರ ಕರ್ನಾಟಕ ಮನರಂಜನಾ ತೆರಿಗೆಯ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೮೭ರ ಕರ್ನಾಟಕ ಮನರಂಜನಾ ತೆರಿಗೆ ೧೨ನೇ ತಿದ್ದುಪಡಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

## ೧೯೮೭ರ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಂಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕ

### ಪರ್ಯಾಲೋಚನೆ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಂಬುಗಳು ಮತ್ತು ಉದ್ಯೋಗಗಳು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಸಂಬಳದ ಬಗ್ಗೆ ಪ್ರಸ್ತಾಪ ಇದೆ. ೧೫೦೦ ರೂ.ಗಳಿಂದ ೨೦೦೦ ರೂ.ವರೆಗೆ ಮಂತ್ರಿ ಆದಕ್ಕೆ ಮೇಲ್ಪಟ್ಟ ಆದಾಯ ಬರತಕ್ಕಂಥವರಿಗೆ ಈ ವೃತ್ತಿ ತೆರಿಗೆಯನ್ನು.....

ಶ್ರೀ ಎಂ ಎಸ್. ಕೃಷ್ಣನ್.—ಅಧ್ಯಕ್ಷರೆ, ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಬಿಲ್ ಏನಿದೆ ಈ ಬಿಲ್ ತಾವು ನೋಡಿದರೆ ಇವತ್ತು ಮನರಂಜನ ತೆರಿಗೆಯ ಅನುಬಂಧದ...

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಲ್ಪ ಮಿಸ್ಟೇಕ್ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಮಿಸ್ಟೇಕ್ ಏನು ಇದೆ, ಇದು ಏನಾಗಿದೆ ಇವತ್ತಿನ ದಿವಸ ಸಂಪೂರ್ಣವಾಗಿ ಎಲ್ಲರಿಗೂ ಕೊಟ್ಟಿರುವ ಅನೆಕ್ಸರ್ ಎಕ್ಸ್‌ಟ್ರಕ್ಟ್ಸ್ ನೋಡಿದರೆ. ಈ ವಿಧೇಯಕವನ್ನು ಮಾನ್ಯ ಸಭೆಯ ಮುಂದೆ ಮಂಡಿಸಬೇಕಾದ ಸಂದರ್ಭದಲ್ಲಿ ಮಸೂದೆಯಲ್ಲಿ ಏನೇನು ಇರಬೇಕು. ಯಾವ್ಯಾವುದು ಅಡಕವಾಗಿರಬೇಕು. ಶೀರ್ಷಿಕೆ, ಖಂಡ ಇವುಗಳನ್ನೆಲ್ಲಾ ಪರಿಶೀಲಿಸಬೇಕು ಈಗ ಎಲ್ಲರಿಗೂ ಪ್ರಿಂಟ್ ಮಾಡಿ ಕೊಟ್ಟಿರುವುದರಲ್ಲಿ ಏನು ಇದೆಯೆಂದರೆ ಅನೆಕ್ಸ್‌ಚರ್ ಎಕ್ಸ್‌ಟ್ರಾಕ್ಟ್ ಪ್ರಮ್ ಕರ್ನಾಟಕ ಎಂಟ್ರರ್‌ಟೈನ್‌ಮೆಂಟ್ ಟ್ಯಾಕ್ಸ್ ಎಂದೂ ಹಾಕಿದ್ದಾರೆ. ಪ್ರಶ್ನೆ ಏನಿದೆಯೆಂದರೆ ಈ ರೀತಿ ಒಂದು ಬಿಲ್‌ನ್ನು ಸಭೆಯ ಮುಂದೆ ಮಂಡಿಸಬೇಕಾದರೆ ಏನೇನು ಇದರಲ್ಲಿ ಇರಬೇಕು ಎನ್ನುವುದು. ಟೈಟಿಲ್ ಇರಬೇಕು. ಪ್ರಿಯಾಂಬಲ್ ಇರಬೇಕು, ಕ್ಲಾಸ್ ಸ್ಪೆಸಿಫಿಕ್ ಆಗಿರಬೇಕು, ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ರಿಸನ್ಸ್ ಇರಬೇಕು, ಫೈನಾನ್ಸ್ ಯಲ್ ಮೆಮೊರಾಂಡಮ್ ಇರಬೇಕು, ಇವುಗಳ ಜೊತೆ ಅನೆಕ್ಸ್‌ಚರ್ ಕೂಡ ಸೇರಿರಬೇಕು. ಅನೆಕ್ಸ್‌ಚರ್ ಇಲ್ಲದೆ ಬಿಲ್‌ನ್ನು ತಂದರೆ ಹೇಗೆ ಸಾಧ್ಯ. ಲೋಕಸಭೆಯ ಡಿಬೆಟ್‌ನಲ್ಲಿ ಕೌಲ್ ಮತ್ತು ಶೆಕ್‌ದಾರ್ ಬರೆದಿರುವುದನ್ನು ಓದಿ ಹೇಳುತ್ತೇನೆ. ಅನೆಕ್ಸ್‌ಚರ್ ಇಲ್ಲ ಇವೊತ್ತಿನ ದಿವಸ ಬೇರೆ ಬಿಲ್‌ನ್ನು ತಂದರೆ ಯಾವ ಯಾವ ಕ್ಲಾಸ್ ಇದೆಯೊಂದು ಅಮೆಂಡ್ ಮಾಡುತ್ತೀರಿ ? ಒರಿಜಿನಲ್ ಆಕ್ಟ್‌ನಲ್ಲಿ ಯಾವ ಕ್ಲಾಸ್ ಇದೆ. ಅದನ್ನು ಯಾವ ರೀತಿ ಅಮೆಂಡ್ ಮಾಡುತ್ತೀರಿ ? ಇವೊತ್ತಿನ ದಿವಸ ಲೋಕಸಭೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ಲೋಕಸಭಾ ಡಿಬೆಟ್‌ನಲ್ಲಿ ಕೌಲ್ ಮತ್ತು ಶೆಕ್‌ದಾರ್ ಹೇಳಿರುವುದನ್ನು ಇಲ್ಲಿ ಹೇಳುತ್ತೇನೆ. ಪೇಜ್ ನಂ. ೪೬೧ ರಲ್ಲಿ ಎಲ್ಲವನ್ನು ಸೇರಿಸಿದ್ದಾರೆ. ಪೇಜ್ ನಂ. ೪೫೪, ೪೫೫ರ ಪಠಗೆ ಬಿಲ್ಸ್ ಎಂದರೆ ಏನು ಎಂದು ದೀರ್ಘವಾಗಿ ಹೇಳಿದ್ದಾರೆ. ಶಾರ್ಟ್ ಟೈಟಿಲ್ ಇರಬೇಕು, ಎಕ್ಸ್‌ಟೆಂಟ್ ಕ್ಲಾಸ್ ಇರಬೇಕು, ಕಮೆನ್ಸ್‌ಮೆಂಟ್ ಕ್ಲಾಸ್ ಇರಬೇಕು, ಇಂಟರ್‌ಪ್ರಿಟೇಷನ್ ಅಥವಾ ಡೆಫಿನಿಷನ್ ಕ್ಲಾಸ್ ಇರಬೇಕು, ಡ್ಯುರೇಷನ್ ಕ್ಲಾಸ್ ಇರಬೇಕು, ಡಿಕ್ಲರೇಟರಿ ಕ್ಲಾಸ್ ಇರಬೇಕು, ರೂಲ್ ಮೇಕಿಂಗ್ ಕ್ಲಾಸ್ ಇರಬೇಕು, ರೀಪೀಲ್ ಮತ್ತು ಸೇವಿಂಗ್ಸ್ ಕ್ಲಾಸ್ ಇರಬೇಕು, ಷಡ್ಯೂಲ್ಸ್ ಇರಬೇಕು, ಸ್ಟೇಟ್‌ಮೆಂಟ್ ಆಫ್ ಆಬ್ಜಕ್ಟ್ಸ್ ಮತ್ತು ರೀಸನ್ಸ್ ಕ್ಲಾಸ್ ಇರಬೇಕು, ನೋಟ್ಸ್ ಆನ್ ಕ್ಲಾಸಸ್ ಇರಬೇಕು, ಮೆಮೊರಾಂಡಮ್ ಆಫ್ ಡೆಲಿಗೇಟಿಡ್ ಲೇಜ್ಲಿಲೇಷನ್, Memorandum Regarding Modifications contained in a Bill to replace and an Ordubabce, ಇವುಗಳ ಜೊತೆಯಲ್ಲಿ ಅನೆಕ್ಸ್‌ಚರ್ ಇರಬೇಕು.

"Where certain sections of the parent Act are sought to be amended the text thereof is generally appended to every amending Bill in the form of an annexure. In case the number of sections involved is large, the sections are not reproduced as an annexure, but, copies of the original Act are supplied by the Minister concerned for distribution to, for use of members.

Before 1950 the text of sections of an Act sought to be amended by an amending Bill was not printed along with the Bill.

On August 14, 1950, when the Bill further to amend the Essential Supplies (Temporary Powers) Act, came up for consideration befor the House, a point was raised that along with an amending Bill the relevant sections of the original Act which are sought to be amended should also be printed for the purpose of facilitating the work of members. On this Speaker directed :

In future whenever amending Bills are presented to amend original acts, a Schedule of the relevant sections from the original Acts should be given with the Bill."

ಈಗ ನನ್ನ ಪಾಯಿಂಟ್ ಏನೆಂದರೆ ಸೇರಿರುವುದು ಬರೀ ಮಿಸ್ಟೇಕ್ ಅಲ್ಲ. It is an infarmenty in the Bill, it should be withdrawned immediately, ಬೇಕಾದರೆ ಇನ್ನೊಂದು ದಿವಸ ಮೂವ್ ಮಾಡಿ. ಅದನ್ನು ಸರಿಯಾಗಿ ಪ್ರೀಟ್ ಮಾಡಿಸಿ ಎಲ್ಲರಿಗೂ ಕೊಡಿ. ಆಮೇಲೆ ಅದರ ಬಗ್ಗೆ ಚರ್ಚೆ ಮಾಡೋಣ ಬೇಕೆಂದರೆ ಮತ್ತೊಂದು ದಿವಸ ಅದರ ಬಗ್ಗೆ ಚರ್ಚೆ ಮಾಡೋಣ. ಅದರ ಬಗ್ಗೆ ತಾವು ನಮಗೆ ಪ್ರೊಟೆಕ್ಷನ್ ಕೊಡಬೇಕು. ಸ್ಪೀಕರ್ ಆಗಿ ತಾವೇ ರೂಲಿಂಗ್ ಕೊಡಬೇಕು. ಲೋಕಸಭಾ ಡಿಬೆಟ್‌ನಲ್ಲಿ ಸ್ಪೀಕರ್ ಅದಕ್ಕೆ ರೂಲಿಂಗ್ ಕೊಟ್ಟಿರುವುದು. ಇದು ಬಹಳ ಲೇಂತಿಯಾಗಿರುವುದರಿಂದ ನಾನು ಇದರ ಬಗ್ಗೆ ಓದುವುದಕ್ಕೆ ಹೋಗುವುದಿಲ್ಲ. ನಾನು ತಮಗೆ ಕೇಳಿಕೊಳ್ಳುವುದೇನೆಂದರೆ, ಪಂಡಿತ್ ಠಾಕೂರ್‌ದಾಸ್ ಭಾರ್ಗವ ಅವರೆಲ್ಲ ಅದನ್ನೆ ಆರ್‌ಗ್ಯೂ ಮಾಡಿದರು. ಕೊನೆಗೆ ಸ್ಪೀಕರ್ ರೂಲಿಂಗ್ ಕೊಟ್ಟು ತೀರ್ಮಾನ ಮಾಡಿದ್ದಾರೆ. ಅದರ ಪ್ರಕಾರ ಪ್ರತಿಯೊಂದು ಬಿಲ್ ಬಂದಾಗ ಅದಕ್ಕೆ ಅನೆಕ್ಸ್‌ಚರ್‌ನ್ನು ಸೇರಿಸಿ ಕೊಡಬೇಕು. ಆದರೆ ಈ ಸಲ ಅದಕ್ಕೆ ಬೇರೆ ಯಾವುದೋ ಅನೆಕ್ಸ್‌ಚರ್‌ನ್ನು ಸೇರಿಸಿದ್ದಾರೆ. ಮತ್ತೆ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್‌ನ್ನು ಸೇರಿಸಿದ್ದಾರೆ. ಇದಂತೂ ನನಗೆ ಏನೂ ಅರ್ಥವಾಗುತ್ತಿಲ್ಲ. ಇದನ್ನು ಹೇಗೆ ಮಾಡಿದ್ದಾರೆಂದು ನನಗೆ ತಿಳಿಯುತ್ತಿಲ್ಲ. It is not only show in competance as the part of the Govt. ಸರ್ಕಾರದ ಎಫಿಷಿಯೆನ್ಸ್ ಎಷ್ಟು ಚೆನ್ನಾಗಿದೆಯೆಂದು ಗೊತ್ತಾಗುತ್ತದೆ. ಮಾನ್ಯ ಲಕ್ಷ್ಮೀಸಾಗರ್‌ರವರು ಈ ರೀತಿ ಮಾಡಿದ್ದಾರೆಂದು ನನಗೆ ನಂಬಲಾಗುತ್ತಿಲ್ಲ. ಏಕೆಂದರೆ ಅವರು ಬೆಳಿಗ್ಗೆ ೮ ಗಂಟೆಗೆ ಬಂದರೆ ರಾತ್ರಿ ೧೦ ಗಂಟೆಯ ತನಕ ಆಫೀಸ್‌ನಲ್ಲಿ ಇರುತ್ತಾರೆ. ಅವರಿಗೆ ಬೇರೆ ಯಾವುದೇ ಹವ್ಯಾಸಗಳು ಇಲ್ಲ. ಪುಂಪೆಯಾಗಿಲ್ಲ. ಸಂಸಾರ ತಾಪತ್ರಯವಿಲ್ಲ. ಅಂತವರು ಇದನ್ನು ಏಕೆ ನೋಡಿಲ್ಲ ? ಅವರೇ ಪ್ರತಿಯೊಂದನ್ನು ನೋಡಬೇಕೆಂದು ನಾನು ಹೇಳುವುದಿಲ್ಲ. ಏಕೆಂದರೆ ಅವರು ಬಹಳ ಬಿಜಿಯಾಗಿರುತ್ತಾರೆ. What about the Law Department ? Why it is so incompetent ? Why they did not print it properly? These are all various questions arises apart from the basic qusstion It is infirmity in the Bill itself. It cannot be considered at all to-day. It may be considered later on. ಅದನ್ನು ಸರಿಯಾಗಿ ಪ್ರಿಂಟ್ ಮಾಡಿ ಕೊಡಲಿ. ಅದಕ್ಕೆ ತಾವು ರೂಲಿಂಗ್ ಕೊಡಿ. ನಂತರ ಅದರ ಬಗ್ಗೆ ನಾವು ಒಪ್ಪಿಕೊಳ್ಳುತ್ತೇವೆ. I would request you to give a considerate ruling in view of the Lok Sabha Debate and in view of what is stated in practice and Procedure of Kaul and Shakdher.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸರ್ಕಾರಿ ಮುದ್ರಣಾಲಯದಲ್ಲಿ ಕೆಲಸದ ಒತ್ತಡದಿಂದ ತೊಂದರೆಯಾಗಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಈ ಒಂದು ತಪ್ಪು ಗೊತ್ತಾದ ತಕ್ಷಣ ಅದನ್ನು ಸರಿಪಡಿಸಿ, ಸರಿಯಾದಂಥ ಪ್ರತಿಗಳನ್ನು ಈಗಾಗಲೇ ಕೊಟ್ಟಿದ್ದೇನೆ. ಆದ್ದರಿಂದ ನಾನು ತಪ್ಪನ್ನು ಇಲ್ಲವೆಂದು ಹೇಳುವುದಿಲ್ಲ.

( ಗೊಂದಲ )

ಶ್ರೀ ಎಂ. ಎಸ್. ಕೃಷ್ಣನ್.—ನಮಗೆ ಸರಿಯಾದ ಪ್ರತಿಯನ್ನು ಕೊಟ್ಟಿಲ್ಲ. ಅದನ್ನು ಕೊಟ್ಟ ಮೇಲೆ ಹೇಳಿ.

( ಗೊಂದಲ )

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಮಗೆ ಬಂದಿರುವುದು ಹಳೆಯ ಕಾಪಿಗಳೇ, ನಮಗೆ ಬೇರೆ ಯಾವುದನ್ನು ಕೊಟ್ಟಿಲ್ಲ.

( ಗೊಂದಲ )

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ. ಈ ಸದನದಲ್ಲಿ ಸರಿಯಾದಂಥ ಪ್ರತಿಗಳನ್ನು ಯಾರಿಗೂ ಕೊಟ್ಟಿಲ್ಲ. ಯಾರಿಗೋ ಒಬ್ಬರಿಗೆ ಪ್ರಿಂಟ್ ಮಾಡಿಸಿ ಕೊಟ್ಟು ಎಲ್ಲರಿಗೂ ಕೊಟ್ಟಿದ್ದೇವೆಂದರೆ ಹೇಗೆ ? How is it correct ? It is not at all correct.

ಅಧ್ಯಕ್ಷರು.—ಸರಿಯಾದ ಪ್ರತಿಗಳನ್ನು ಮೊದಲು ಎಲ್ಲರಿಗೂ ಕೊಡಿ. ನಂತರ ನೋಡೋಣ. Ruling is reserved.

Sri M. S. Krishnan.—Keep it pending. Thank you very much.

೧೯೬೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—೧೯೬೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೬೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೫ರವರೆಗೆ

ಅಧ್ಯಕ್ಷರು.—"ಖಂಡ ೨ ರಿಂದ ೫ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೫ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ ೧ ಇತ್ಯಾದಿ :

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—೧೯೬೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

(ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು, ಮತ್ತು ಮುಸೂದೆಗೆ ಒಪ್ಪಿಗೆ ನೀಡಲಾಯಿತು)